**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 83/2019**

**ಪ್ರಾ.ಸಾ – 1**

**ಫ್ರಾ.ಸಾ– 1**

**ಸಾಕ್ಷಿಗೆ ದಿನಾಂಕ 16–10–2023 ರಂದು ಪ್ರಮಾಣ ವಚನ ಬೋಧಿಸಲಾಯಿತು**

ಸಾಕ್ಷಿಯ ಹೆಸರು ಃ ಮಹಾಂತಪ್ಪ

ತಂದೆಯ ಹೆಸರು ಃ ಸಿದ್ದಪ್ಪ ಹೂಗಾರ

ವಯಸ್ಸು ಃ 67 ವರ್ಷ

ಉದ್ಯೋಗ ಃ ನಿವೃತ್ತ ಗ್ರಾಮ ಲಕ್ಕಾಧಿಕಾರಿ

ವಾಸಸ್ಥಳ ಃ ಹರವಾಳ

**2 ನೇ ಆರೋಪಿ ಈ ದಿನ ಗೈರು ಹಾಜರಾಗಿದ್ದು ಆತನ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ನಾನು 2002 ರಿಂದ 2017 ರವರೆಗೆ ನಾನು ಜೇವರ್ಗಿಯ ಕೋನಾ ಹಿಪ್ಪರಗಾ ಗ್ರಾಮದ ಗ್ರಾಮ ಲೇಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2015 ಜುಲೈ ತಿಂಗಳನ ಒಂದು ದಿನದಂದು ಬೆಳಿಗ್ಗೆ 06–3.0 ಗಂಟೆ ಸಮಯದಲ್ಲಿ ನಾನು ಜೇವರ್ಗಿಯಲ್ಲಿದ್ದಾಗ ಕೋನಾ ಹಿಪ್ಪರಗಿಯ ಭೀಮಾ ನದಿಯ ದಂಡೆಯಿಂದ ಅಕ್ರಮವಾಗಿ ಮರಳು ಸಾಗಾಣೆ ಮಾಡುತ್ತಿದ್ದಾರೆಂದು ಅಂತ ಮಾಹಿತಿ ಬಂದಿರುತ್ತದೆ. ಆ ನಂತರ ನಾನು ಜೇವರ್ಗಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಸದರಿ ಮಾಹಿತಿ ವಿಚಾರವನ್ನು ಪೊಲೀಸ್ ಅಧಿಕಾರಿ SS ಹುಲ್ಲೂರರವರಿಗೆ ತಿಳಿಸಿರುತ್ತೇನೆ. ಆ ನಂತರ ನಾನು, ಪೊಲೀಸ್ ಸಿಬ್ಬಂದಿ ಹಾಗೂ ಪಂಚರು ಸೇರಿ ಖಾಸಗಿ ವಾಹನದಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ಪಂಚರ ಹೆಸರು ನನಗೆ ವಯಸ್ಸಾದ ಕಾರಣ ನನಗೆ ನೆನಪಿಗೆ ಬರುತ್ತಿಲ್ಲ. ನಾವು ಘಟನಾ ಸ್ಥಳಕ್ಕೆ ಹೋದಾಗ 07–00 ರಿಂದ 07–30 ಗಂಟೆ ಸಮಯವಾಗಿತ್ತು. ನಾವು ಘಟನಾ ಸ್ಥಳದ ಬಳಿ ಗಿಡ ಗಂಟೆಗಳ ಮರೆಯಲ್ಲಿ ನಿಂತು ನೋಡಲಾಗಿ ಸುಮಾರು 5 ಜನರು 2 ಟಿಪ್ಪರ್ ಹಾಗೂ 2 ಟ್ರ್ಯಾಕ್ಟರ್ ಗಳು ಇದ್ದು ಅವುಗಳಲ್ಲಿ ಅಕ್ರಮವಾಗಿ ಮರಳು ತುಂಬುತ್ತಿದ್ದರು ನಾವು ಸದರಿ ಸ್ಥಳಕ್ಕೆ ಹೋದಾಗ ಮೂರು ಜನರು

ಓಡಿಹೋಗಿದ್ದು ಇಬ್ಬರು ಜನ ಸಿಕ್ಕಿರುತ್ತಾರೆ. ಸದರಿ ಇಬ್ಬರು ಜನರ ಹೆಸರು ನನಗೆ ವಯಸ್ಸಾದ ಕಾರಣ ನೆನಪಿಗೆ ಬರುತ್ತಿಲ್ಲ. ಸದರಿ ಜನರು ಅಕ್ರಮವಾಗಿ ಸದರಿ ಸ್ಥಳದಿಂದ ಮರಳು ಸಾಗಾಟ ಮಾಡುತ್ತಿರುವುದು ಕಂಡುಬಂತು ಸದರಿ ಜಾಗದಲ್ಲಿ ಮರಳು, ಟ್ರ್ಯಾಕ್ಟರ್ ಹಾಗೂ ಟಿಪ್ಪರುಗಳಿದ್ದವು. ಸದರಿ ಜನರು ಯಾವುದೇ ಪರವಾನಿಗೆ ಇಲ್ಲದೇ ಮರಳು ಸಾಗಾಟ ಮಾಡುತ್ತಿದ್ದರು. ಜಾಗದಲ್ಲಿ ಪಂಚನಾಮೆ ಮಾಡಿರುತ್ತೇವೆ. ಆ ನಂತರ ಮರಳು ಹಾಗೂ ವಾಹನಗಳನ್ನು ಠಾಣೆಗೆ ತೆಗೆದುಕೊಂಡು ಬಂದಿರುತ್ತೇವೆ. ಸದರಿ ಟಿಪ್ಪರ್ ಹಾಗೂ ಟ್ರ್ಯಾಕ್ಟರಗಳ ನೊಂದಣಿ ಸಂಖೆ ಹೇಳಲು ಬರುವುದಿಲ್ಲ ಆದರೆ ಪ್ರತಿ ವಾಹನಗಳಲ್ಲಿ ಸುಮಾರು 4 ಬ್ರಾಸ್ ಮರಳಿತ್ತು. ಸದರಿ ವಾಹನಗಳಲ್ಲಿದ ಮರಳಿನ ಅಂದಾಜು ಮೌಲ್ಯ ತಲಾ ರೂ.5000/- ಇತ್ತು. ನಾನು ಓಡಿಹೋದಂತಹ ವ್ಯಕ್ತಿಗಳನ್ನು ನೋಡಿ ಮರುಹೇಳಿಕೆ ನೀಡಿಲ್ಲ. ಸದರಿ ಟಿಪ್ಪರ್ ಹಾಗೂ ಟ್ರ್ಯಾಕ್ಟರ್ ವಾಹನಗಳನ್ನು ಈಗ ನೋಡದರೆ ಗುರುತಿಸಲು ಆಗುವುದಿಲ್ಲ. ನಾವು ಆ ದಿನ ಹಿಡಿದುಕೊಂಡಂತಹ ಆರೋಪಿಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರು ಆಗಿದ್ದು ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ದೂರನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಲಾಗಿ ಅದು ಜಪ್ತಿ ಪಂಚನಾಮೆ ಆಗಿದ್ದು ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಜಪ್ತಿ ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 16 ಪೊಟೊಗಳನ್ನು ತೊರಿಸಲಾಗಿ ಅದರಲ್ಲಿ 2 ಪೊಟೋಗಳಲ್ಲಿರುವ ಟಿಪ್ಪರ್ ವಾಹನಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ಆ ದಿನ 4 ಟಿಪ್ಪರ್ ವಾಹನಗಳಲ್ಲಿ ಅಕ್ರಮವಾಗಿ ಮರಳನ್ನು ಸಾಗಾಟ ಮಾಡಲಾಗುತ್ತಿತ್ತು ಅವುಗಳ ಸಂಖ್ಯೆ ಕೆಎ-35 ಎ-0434, ಎಂ.ಹೆಚ್.04 ಸಿಯು-5681, ಕೆಎ-32 ಬಿ-3616, ಜಿಎ-06 ಜಿ-1177 ಆಗಿತ್ತು ಎಂದರೆ ನಿಜ. ನಾವು ಆ ದಿನ ಹಿಡಿದುಕೊಂಡ ಆರೋಪಿತರ ಹೆಸರು ಗುಂಡಪ್ಪ ತಂದೆ ಅಣವೀರಪ್ಪ ಹಾಲಕಾಯಿ ಹಾಗೂ ಶರಣಪ್ಪ ತಂದೆ ಗುಂಡಪ್ಪ ಸಾಃ ಸರಡಗಿ ಎಂದರೆ ನಿಜ. ದಿನಾಂಕ 03-07-2015 ರಂದು ಪೊಲೀಸರು ನನಗೆ ಠಾಣೆಗೆ ಕರೆದು ಓಡಿ ಹೋದಂತಹ ಆರೋಪಿತರನ್ನು ತೋರಿಸಿರುತ್ತಾರೆಂದರೆ ನಿಜ. ಪೊಲೀಸರು ನನಗೆ ತೋರಿಸಿದಂತಹ ಆರೋಪಿತರ ಹೆಸರು ಅಪ್ಪಾಸಾಬ್ ತಂದೆ ಅಣವೀರಪ್ಪ ಹಾಲಕಾಯಿ, ಜಗದೀಶ ತಂದೆ ಅಣವೀರಪ್ಪ ಹಾಲಕಾಯಿ, ರಾಜಶೇಖರ ತಂದೆ ಬಸವರಾಜ ಶಿಕೂರು ಬಾವಗೋಳ, ಕಲ್ಯಾಣಪ್ಪ ಹಾಲಕಾಯಿ ಎಂದರೆ ನಿಜ. ಆರೋಪಿತರನ್ನು ಗುರುತಿಸಿದ ವಿಚಾರವಾಗಿ ನಾನು ಪೊಲೀಸರಿಗೆ ಪೊಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆಂದರೆ ನಿಜ.

**ಪಾಟೀ ಸವಾಲುಃ ಶ್ರೀ ಎಂ.ಎಸ್.ಪಿ. ಆರೋಪಿತರ ಪರ ವಕೀಲರಿಂದ**

ನನಗೆ ಮಾಹಿತಿ ಬಂದಂತಹ ನಿರ್ದಿಷ್ಟ ದಿನಾಂಕ ಗೊತ್ತಿಲ್ಲ. ನಾನು ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಇಲಾಖೆಯಿಂದ ನಮಗೆ ಇಂತಿಷ್ಟು ಪ್ರಕರಣ ದಾಖಲಿಸಬೇಕು ಎಂದು ನಿರ್ದೇಶನ ಇತ್ತು ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಅರ್ಧ ಗಂಟೆ ಇದ್ದೆ. ಘಟನಾ ಸ್ಥಳದಲ್ಲಿ ಮರಳು ತುಂಬುವ ಸಾಮಾನುಗಳಾದ ಸನಕೆ ಮತ್ತು ಬುಟ್ಟಿ ಮತ್ತು ಮರಳು ತುಂಬುವ ಕಾರ್ಮಿಕರು ಇದ್ದರೆ ಎಂದರೆ ಸಾಕ್ಷಿ JCB ಯಿಂದ ತುಂಬುತ್ತಿದ್ದರು ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಒಂದೇ ಹಳದಿ ಬಣ್ಣದ JCB ಇದ್ದು ಅದರ ನೊಂದಣಿ ಸಂಖ್ಯೆ ಗೊತ್ತಿಲ್ಲ. ಜೇವರ್ಗಿ ತಾಲೂಕಿನ ವ್ಯಾಪ್ತಿಗೆ ಬರುವ ಭೀಮಾ ನದಿ ದಂಡೆಯ ಎಷ್ಟು ವಿಸ್ತೀರ್ಣದ ಕ್ಷೇತ್ರದಲ್ಲಿ ಮರಳನ್ನು ಅಗೆಯಲು ಪರವಾನಿಗೆ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕಂದಾಯ ಇಲಾಖೆ ಹಾಗೂ ಭೂ–ವಿಜ್ಞಾನ ಇಲಾಖೆಯವರು 6 ಸ್ಥಳಗಳಲ್ಲಿ ಮರಳು ಅಗೆಯಲು ಪರವಾನಿಗೆ ನೀಡಲಾಗಿರುತ್ತದೆ ಎಂದರೆ ನಿಜ. ಪರವಾನಿಗೆ ಪಡೆದವರು ಕಾನೂನು ಪ್ರಕಾರ ಸ್ಥಳಗಳಲ್ಲಿ ಮರಳನ್ನು ಅಗೆಯುತ್ತಾರೆ ಎಂದರೆ ನಿಜ. ಟಿಪ್ಪರ್ ಹಾಗೂ ಟ್ರ್ಯಾಕ್ಟರ್ ನೊಂದಣಿ ಸಂಖ್ಯೆ ಹೇಳಲು ಬರುವುದಿಲ್ಲ. ಆರೋಪಿತರು ಆ ದಿನ ಅಕ್ರಮವಾಗಿ ಮರಳನ್ನು ಅಗೆಯುತ್ತಿರಲಿಲ್ಲ ಹಾಗೂ ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆಯವರು ಹಾಗೂ ಪೊಲೀಸ್ ಇಲಾಖೆಯವರು ಕೂಡಿಕೊಂಡು ಕಚೇರಿಯಲ್ಲೆ ದಾಖಲೆ ತಯಾರಿಸಿ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವು ದೇ ಸಂಬಂಧ ಇರದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಠಾಣೆಗೆ ಮರಳಿ ಬಂದಾಗ ಸಮಯ 09–30 ಗಂಟೆ ಆಗಿತ್ತು. ನಾವು ಮತ್ತು ಪೊಲೀಸರು ಸೇರಿ ಆರೋಪಿತರ ವಿರುದ್ಧ ಕಟ್ಟುಕತೆ ಕಟ್ಟಿಸುಳ್ಳು ಪ್ರಕರಣ ದಾಖಲಿಸುವಂತೆ ಮಾಡಿರುತ್ತೇವೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂಡಾಧಿಕಾರಿಗಳು, ಜೇವರಗಿ